**ಸಾಕ್ಷಿಯನ್ನು ದಿಃ 18.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು ಃ 5ನೇ ವಾದಿಯ ಪರ ಶ್ರೀ ಎಲ್ ಪಿ ಜಿ ವಕೀಲರಿಂದಃ**

1) ದಾವಾ ಸ್ವತ್ತು ಮೂಲತಃ ನನ್ನ ಸ್ವತ್ತಾಗಿದೆ. 1987 ರಲ್ಲಿ ಸರ್ಕಾರಕ್ಕೆ ಮಂಜೂರು ಮಾಡುವಂತೆ ಅರ್ಜಿ ಸಲ್ಲಿಸಿದ್ದೆ. ದಾವಾ ಸ್ವತ್ತು 3 ಗುಂಟೆ ಕರಾಬು ಸೇರಿ ಒಟ್ಟು 26 ಗುಂಟೆ. ದಾವಾ ಸ್ವತ್ತಿನ ಪೂರ್ವಕ್ಕೆ –ಹಡೇನಹಳ್ಳಿ ಗಡಿ, ಪಶ್ಚಿಮಕ್ಕೆ– ಮುತ್ತಪ್ಪನ ನಾಗಣ್ಣ, ಉತ್ತರಕ್ಕೆ – 1ನೇ ಮತ್ತು 5ನೇ ಪ್ರತಿವಾದಿಯರ ಜಮೀನು, ದಕ್ಷಿಣಕ್ಕೆ – ರಸ್ತೆ. ನನಗೆ 2003 ರಲ್ಲಿ ಸರ್ಕಾರದಿಂದ 26 ಗುಂಟೆ ಮಂಜೂರಾಗಿರುತ್ತದೆ. ಮಂಜೂರಾತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ. ಮಂಜೂರಾತಿಗೆ ಅರ್ಜಿ ಸಲ್ಲಿಸುವ ಸಮಯದಲ್ಲಿ 3 ಗುಂಟೆ ಕರಾಬು ಇದ್ದ ಜಮೀನ ಪಹಣಿ ಪತ್ರಿಕೆಯಲ್ಲಿ ಗೋಮಾಳ ಅಥವಾ ಸರ್ಕಾರಿ ಜಮೀನು ಎಂದು ನಮೂದಿಸಿತ್ತ ಎಂದರೆ ಸಾಕ್ಷಿ ಎರಡನ್ನು ನಮೂದಿಸಿತ್ತು ಎನ್ನುತ್ತಾರೆ.

2) ಮಂಜೂರಾದ ಸಮಯದಲ್ಲಿ ಪಹಣಿ ಪತ್ರಿಕೆಯಲ್ಲಿ ಒಟ್ಟು 26 ಗುಂಟೆ ವಿಸ್ತೀರ್ಣ ಸರ್ಕಾರಿ ಗೋಮಾಳ ಅಥವಾ ಸರ್ಕಾರಿ ಜಮೀನು ಎಂದು ನಮೂದಿಸಿತ್ತ ಎಂದರೆ ನೆನಪಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಉತ್ತರಕ್ಕೆ ಸರ್ವೆ ನಂಬರ್ 68 ರಲ್ಲಿ 1 ಎಕರೆ 7ವರೆ ಗುಂಟೆ 5ನೇ ಪ್ರತಿವಾದಿಗೆ ಸೇರಿದ ಸ್ವತ್ತು ಇದೆ ಎಂದರೆ ಸಾಕ್ಷಿ ಅವರ 3 ಜನ ಅಣ್ಣತಮ್ಮಂದಿರಿಗೆ ಸೇರಿದ ಸ್ವತ್ತುಗಳು ಇದೆ ಎನ್ನುತ್ತಾರೆ. ಸರ್ವೆ ನಂಬರ್ 68 ರ ಸ್ವತ್ತು ಸಹ ಸರ್ಕಾರಕ್ಕೆ ಸೇರಿದ್ದು ಎಂದರೆ ಇರಬಹುದು ಎನ್ನುತ್ತಾರೆ. ಸರ್ವೆ ನಂಬರ್ 68 ರಲ್ಲಿ ಒಟ್ಟು ವಿಸ್ತೀರ್ಣ 1 ಎಕರೆ 38 ಗುಂಟೆ ವಿಸ್ತೀರ್ಣ 5ನೇ ಪ್ರತಿವಾದಿಯ ತಂದೆ ಕೆಂಪೇಗೌಡರವರಿಗೆ ದುರಸ್ತಿ ಮೇರೆಗೆ ಬಂದಂತಹ ಸ್ವತ್ತಾಗಿರುತ್ತದೆ ಎಂದರೆ ಇರಬಹುದು. ಕೆಂಪೇಗೌಡರವರ ಮರಣಾ ನಂತರ ಅವರ ಹೆಂಡತಿ ದೇವಮ್ಮ ರವರ ಹೆಸರಿಗೆ ಪೌತಿ ಖಾತೆ ಆಗಿರುತ್ತದೆ ಎಂದರೆ ಸರಿ.

3) ಸರ್ವೆ ನಂಬರ್ 69 ಕ್ಕೆ ಸಂಬಂಧಿಸಿದಂತೆ 5ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು1999 ರಲ್ಲಿ 30 ಗುಂಟೆ ವಿಸ್ತೀರ್ಣವನ್ನು ಮಂಜೂರು ಮಾಡುವಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ನಕಲಿ ಅರ್ಜಿ ಎನ್ನುತ್ತಾರೆ. ನಾನು ಅರ್ಜಿ ಸಲ್ಲಿಸುವ ಮೊದಲೇ ಸುಮಾರು 50 ವರ್ಷಗಳಿಂದ 5ನೇ ಪ್ರತಿವಾದಿಯರ ತಾತ ಪುಟ್ಟೇಗೌಡರವರೇ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೂಲಕವೇ 5ನೇ ಪ್ರತಿವಾದಿಯ ಸ್ವತ್ತಿಗೆ ಹೋಗಬೇಕು ಎಂದರೆ ಸಾಕ್ಷಿ ಸಮಾನ್ಯವಾಗಿ ಹೋಗುತ್ತಾರೆ ಎಂದು ಹೇಳುತ್ತಾರೆ. ದಾವಾ ಸ್ವತ್ತು ಹಡೇನಹಳ್ಳಿ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ದೇವಮ್ಮ ರವರ ಮೃತಪಟ್ಟ ನಂತರ ದಾವಾ ಸ್ವತ್ತಿನಲ್ಲಿ 13 ಗುಂಟೆ ವಿಸ್ತೀರ್ಣವನ್ನು 1ನೇ ಪ್ರತಿವಾದಿ ಉಳಿದ 13 ಗುಂಟೆ ವಿಸ್ತೀರ್ಣವನ್ನು 5ನೇ ಪ್ರತಿವಾದಿ ಅನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ.

4) ದಾವಾ ಸ್ವತ್ತಿನಲ್ಲಿ 1 ಮತ್ತು 5ನೇ ಪ್ರತಿವಾದಿ ಅನುಭವದಲ್ಲಿದ್ದು ಅವರ ಸ್ವಾಧೀನಕ್ಕೆ ನಾನು ಅಡ್ಡಿಪಡಿಸಿದೆ ಎಂದು ನನ್ನ ವಿರುದ್ಧ ದೂರನ್ನು ಸಹ ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ ದೂರು ನೀಡಿದ್ದೆನೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಮೂಲ ಮಂಜೂರಾತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 5ನೇ ಪ್ರತಿವಾದಿ ನನ್ನ ವಿರುದ್ಧ ದೂರು ನೀಡಿದ್ದು ನನ್ನನ್ನು ಪೋಲೀಸರು ಠಾಣೆಗೆ ಕರೆಸಿ ನನ್ನಿಂದ ಮುಚ್ಚಳಿಕೆ ಬರೆಸಿಕೊಂಡರು ಎಂದರೆ ಸರಿಯಲ್ಲ. ಮುಚ್ಚಳಿಕೆ ಬರೆದುಕೊಟ್ಟಿದ್ದರೂ ನಾನೇ ಅವರ ಸ್ವಾಧೀನಕ್ಕೆ ಅಡ್ಡಿಪಡಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರೇ ನನಗೆ ಮುಚ್ಚಳಿಕೆ ಬರೆದುಕೊಟ್ಟು ತೊಂದರೆ ನೀಡುತ್ತಿದ್ದಾರೆ ಎನ್ನುತ್ತಾರೆ.

5) ದಾವಾ ಸ್ವತ್ತಿನಲ್ಲಿ ಈಗ ನಾನು ಜೋಳ ಬೆಳೆದಿದ್ದೇನೆ. ದಾವಾ ಸ್ವತ್ತು ಒಟ್ಟು ವಿಸ್ತೀರ್ಣ 26 ಗುಂಟೆ ಸರ್ಕಾರಿ ಖರಾಬು ಎಂದೇ ಎಂ ಆರ್ ನಲ್ಲಿ ಕಾಣಿಸುತ್ತಿದೆ ಎಂದರೆ ಸಾಕ್ಷಿ ಮೌನವಾಗಿ

ನಿಲ್ಲುತ್ತಾರೆ. ನಾನು ಯಾವತ್ತು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳ ಆಧಾರದ ಮೇಲೆ ಮಂಜೂರಾತಿ ಪತ್ರ ಪಡೆದಿದ್ದೇನೆ ಎಂದರೆ ಸರಿಯಲ್ಲ. ನಾನು ಅಂದಿನಿಂದ ಇಲ್ಲಿಯವರೆಗೂ ಯಾವುದೇ ಕಂದಾಯ ಸಹ ಕಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಶ್ರೀಮತಿ ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**